ಶ್ರೀ ಜಿ. ಗೋವಿಂದೇಗೌಡ:- ಅಧ್ಯಕ್ಷರೇ ಬೆಳಗಾಂ ತಾಲ್ಲೂಕ್‌ನಲ್ಲಿ ಖಾಲಿ ಇರುವ 62 ಹುದ್ದೆಗಳು ಖಾನಾಪುರ ತಾಲ್ಲೂಕಿನಲ್ಲಿ 56 ಹುದ್ದೆಗಳನ್ನು ಈಗಾಗಲೇ ಭರ್ತಿ ಮಾಡಲು ಕ್ರಮ ತೆಗೆದುಕೊಂಡಿದ್ದು ಜಿಲ್ಲಾಧಿಕಾರಿ ಮತ್ತು ಸಂಬಂಧಪಟ್ಟವರಿಂದ ಸರ್ಟಿಫಿಕೇಟ್ ಬರಬೇಕಾಗಿದೆ. ಅವರಿಂದ ಆದಾಯ ಸರ್ಟಿಫಿಕೇಟ್ ಮತ್ತು ಜಾತಿ ಪ್ರಮಾಣ ಪತ್ರ ಬಂದ ತಕ್ಷಣ ಈ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವ ವ್ಯವಸ್ಥೆಯನ್ನು ಸದ್ಯದಲ್ಲಿ ಮಾಡುತ್ತೇನೆ.

718 ಶ್ರೀ ಎಂ.ದಿವಾಕರ ಬಾಬು:

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಗೌರವಧನ ಪಡೆದು ಕಾರ್ಯ ನಿರ್ವಹಿಸುತ್ತಿರುವ ಶಾಲಾ ಶಿಕ್ಷಕರ ಸಂಖ್ಯೆ ಎಷ್ಟು;

ಆ) ಅವರು ಯಾವ ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ;

ಇ) ಅವರನ್ನು ಖಾಯಂಗೊಳಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಈ) ಹಾಗಿದ್ದಲ್ಲಿ ಅವರನ್ನು ಯಾವಾಗ ಖಾಯಂಗೊಳಿಸಲಾಗುವುದು;

ಎಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು.)

ಅ) ಪ್ರಾಥಮಿಕ ಶಾಲೆಗಳು-125 ಗೌರವಧನ ಶಿಕ್ಷಕರು.

ಪ್ರೌಢ ಶಾಲೆಗಳು -278 ಗೌರವಧನ ಶಿಕ್ಷಕರು.

ಆ) ಪ್ರಾಥಮಿಕ ಶಾಲೆಗಳಲ್ಲಿ 1988-89 ರಿಂದ ಕಾರ್ಯನಿರ್ವಸುತ್ತಿದ್ದಾರೆ.

ಇ) ಪ್ರೌಢ ಶಾಲೆಗಳಲ್ಲಿ ಕೆಲವರು 1994-95 ರಿಂದ ಮತ್ತೆ ಕೆಲವರು 1988-89, 1989-90, 1990-91 ಮತ್ತು 1991-92ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ)ಗೌರವ ಶಿಕ್ಷಕರನ್ನು ನೇರವಾಗಿ ಖಾಯಂಗೊಳಿಸಲು ಸಂಬಂಧಪಟ್ಟ ನಿಯಮಗಳಲ್ಲಿ ಅವಕಾಶವಿರುವುದಿಲ್ಲ. ಆದಾಗ್ಯೂ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಹಿನ್ನೆಲೆಯಲ್ಲಿ ಸದರಿ ಶಿಕ್ಷಕರು ಸಲ್ಲಿಸಿದ ಸೇವಾವಧಿಗೆ ಅನುಗುಣವಾಗಿ ಕೃಪಾಂಕ ನೀಡಿ ಇತರೆ ಅರ್ಹ ಅಭ್ಯರ್ಥಿಗಳ ಜೊತೆಗೆ ನೇಮಕಾತಿಗೆ ಪರಿಗಣಿಸಿ ಅವರಲ್ಲಿ ಅರ್ಹರಾದವರನ್ನು ಸಕ್ರಮ ನೇಮಕಾತಿ ಮಾಡಲಾಗುತ್ತಿದೆ.

ಶ್ರೀ ಅಲ್ಲಂವೀರಭದ್ರಪ್ಪ (ಶ್ರೀ ಎಂ. ದಿವಾಕರ ಬಾಬು ರವರ ಪರವಾಗಿ):- ಗೌರವಧನ ಶಿಕ್ಷಕರು ರಾಜ್ಯದಲ್ಲಿ ಕೇವಲ 300-400 ಜನ ಇದ್ದಾರೆ. ಕಳೆದ 8-10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಆದರೆ ಸರ್ಕಾರ ಸಂದರ್ಶನದ ಸಮಯದಲ್ಲಿ ಅವರಿಗೆ ಹೆಚ್ಚಿನ ಆದ್ಯತೆ ಕೊಟ್ಟು ಸೆಲೆಕ್ಟ್ ಮಾಡುತ್ತೇವೆಂದು ಹೇಳಿದ್ದರು. ಇನ್ನು 2-3 ವರ್ಷವಾದರೆ ಅವರಿಗೆ ನಿವೃತ್ತಿಯಾಗುವ

ವಯಸ್ಸು ಬರುತ್ತದೆ. ಹೆಚ್ಚು ಸಂಖ್ಯೆ ಇಲ್ಲದ ಈ ಶಿಕ್ಷಕರನ್ನು ಖಾಯಂ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್.ಜಿ. ಗೋವಿಂದೇಗೌಡ:- ಅಧ್ಯಕ್ಷರೇ, ಈಗಾಗಲೇ ಗೌರವಧನದ ಮೇಲೆ ಕೆಲಸ ಮಾಡುತ್ತಿರುವ ಶಿಕ್ಷಕರ ಬಗ್ಗೆ ಅವರು ನ್ಯಾಯಾಲಯದ ಮೊರೆ ಹೊಕ್ಕಿದ್ದರೆ, ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಯಾರು ಇವತ್ತು ಕೆಲಸ ಮಾಡುತ್ತಿದ್ದಾರೆ ಅವರಿಗೆ ಕೃಪಾಂಕ ಕೊಡುವ ಆದೇಶ ಕಳುಹಿಸಿದ್ದೇವೆ. ಒಂದು ವರ್ಷ ಅವರು ಪ್ರಾಥಮಿಕ ಪಾಠಶಾಲೆಯಲ್ಲಿ ಅವರು ಕೆಲಸ ಮಾಡಿದ್ದರೆ, 2 ಅಂಕ, ಪಾಠಶಾಲೆಗಳಲ್ಲಿ ಕೆಲಸ ಮಾಡುವವರಿಗೆ 3 ಈ ರೀತಿ ಕೃಪಾಂಕಗಳನ್ನು ಕೊಟ್ಟು ನಾವು ಇವತ್ತು ರೋಸ್ಟರ್ ಸಿಸ್ಟಂ ಮತ್ತು ಮೆರಿಟ್ ಸಿಸ್ಟಂ ಪ್ರಕಾರ ತೆಗೆದುಕೊಳ್ಳುತ್ತಿದ್ದೇವೆ ಅವರಿಗೂ ಪ್ರಾಧಾನ್ಯತೆ ಕೊಟ್ಟು ಎಷ್ಟು ವರ್ಷ ಸೇವೆ ಸಲ್ಲಿಸಿದ್ದಾರೋ ಅದಕ್ಕೆ ಅನುಗುಣವಾದ ಕೃಪಾಂಕಗಳನ್ನು ಸೇರಿಸುವ ವ್ಯವಸ್ಥೆ ಇದೆ. ಈ ಅರ್ಹತೆಯನ್ನು ಪೂರೈಸುವ ಎಲ್ಲರಿಗೂ ಅವಕಾಶ ಸಿಗುತ್ತದೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ನಮ್ಮ ಬಿಜಾಪುರ ಜಿಲ್ಲೆಯಲ್ಲಿ 135 ಶಿಕ್ಷಕರು ಇರುವ ಪಟ್ಟಿ ಇದೆ. ತಾತ್ಕಾಲಿಕ ಆಯ್ಕೆ ಆದು ಅದನ್ನು ಜಿಲ್ಲಾ ಪಂಚಾಯತಿಯವರು ರೆಕಮೆಂಡ್ ಮಾಡಿದ್ದಾರೆ. ಆ ಶಿಕ್ಷಕರು 1988 ರಿಂದ ಇಲ್ಲಿಯವರೆಗೆ ದುಡಿಯುತ್ತಾ ಬಂದಿರುತ್ತಾರೆ. ಅವರಿಗೆ ಮಾನವಿಯ ದೃಷ್ಟಿಯಿಂದ ನೌಕರಿ ಕೊಡಲು ಏನು ಕ್ರಮ ತೆಗೆದುಕೊಂಡಿದ್ದೀರಿ.?

ಅಧ್ಯಕ್ಷರು:- ಅವರಿಗೆಲ್ಲಾ ಹೆಚ್ಚುವರಿ ಅಂಕ ಕೊಟ್ಟು ಅವರನ್ನೆಲ್ಲಾ ಒಳಗಡೆ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆಂದು ಸಚಿವರು ಆಗಲೇ ಹೇಳಿದರಲ್ಲಾ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ:- ಕೃಪಾಂಕಕೊಟ್ಟರೂ ಬಿಜಾಪುರ ಜಿಲ್ಲೆಯಲ್ಲಿ ಇನ್ನೂ 130 ಜನ ಇದ್ದಾರೆ.

ಅಧ್ಯಕ್ಷರು:- ಇನ್ನೇನು ಮಾಡುವುದಕ್ಕೆ ಆಗುತ್ತದೆ. ಹೇಳಿ.? ನೀವು ಮಂತ್ರಿಗಳಾಗಿದ್ದವರು ಗೌರವ ಶಿಕ್ಷಕರು ಎಂದರೆ ಯಾರು? ಯಾರಿಗೆ ನೌಕರಿ ಸಿಕ್ಕಿರುವುದಿಲ್ಲ ಎಲ್ಲಿ ಸರ್ಕಾರಿ ಶಾಲೆ ಇದ್ದು ಟೀಚರ್ಸ್ ಪೋಸ್ಟ್ ಖಾಲಿ ಇರುತ್ತದೆ. ಅಂತಹ ಕಡೆ ಕೆಲಸ ಮಾಡುವವರು. ಮಕ್ಕಳ ಹತ್ತಿರ ದುಡ್ಡು ವಸೂಲು ಮಾಡಿ ಅವರಿಗೆ ಕೊಡುತ್ತಾ ಇರುತ್ತಾರೆ. ಅವರ ಪರ್ಸೆಂಟೇಜು 37-38 ಇರುತ್ತದೆ. ಹೇಗೆ ಮಾಡುವುದು? ರೋಸ್ಟರ್ ಸಿಸ್ಟಂ ಇರುತ್ತದೆ. ಅವರ ಮಧ್ಯೆ ವಯಾಮಿಡಿಯಾ ಮಾಡಿ ಇಷ್ಟು ಕೃಪಾಂಕ ಕೊಟ್ಟರೂ ಬರದೇ ಇದ್ದರೆ, ಅಂತಹವರನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಪ್ರಯೋಜನ ಏನು ಬಂತು ಹೇಳಿ? ತೀರಾ ಕೇಳಗೆ ಇರುವವರನ್ನು ತೆಗೆದುಕೊಂಡರೆ ಇಲಾಖೆಗೆ ಹಾಗೂ ಮಕ್ಕಳಿಗೆ ಎಷ್ಟು ಅನ್ಯಾಯವಾಗುತ್ತದೆ ಯೋಜನೆ ಮಾಡಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ:- ತಾವು ಹೇಳಿದ ಎಲ್ಲಾ ನಿಯಮಗಳನ್ನು ಪಾಲಿಸಿ, ತಾತ್ಕಾಲಿಕ ಯಾದಿಯಲ್ಲಿರುವ 130 ಶಿಕ್ಷಕರು ಪಟ್ಟಿಯಿಂದ ಬಿಟ್ಟುಹೋಗಿದ್ದಾರೆ.

ಅಧ್ಯಕ್ಷರು:- ಸರಿ ಮಾಡುತ್ತಾರೆ.